ಸಂಪಾದಕರು : ಗಣಪತಿ ಭಟ್ಟ

# ಮನುವಿಕಾಸ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ

ಸಂಪುಟ : 7 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕೀಯ ಮಂಡಳಿ : ಶ್ರೀಮತಿ ಶುಭಾ ಪೈ । ಗಣಪತಿ ಹೆಗಡೆ । ಶ್ರೀಕಾಂತ ಹೆಗಡೆ । ಕುಮಾರಿ ಶಿಲ್ಪಾ ಶಾಸ್ತ್ರಿ



## ಮನುವಿಕಾಸ ಸಂಸ್ಥೆಗೆ ಈಡೆಲ್‌ಗೀವ್ ಪ್ರತಿನಿಧಿಗಳ ಭೇಟಿ

ಮಹಿಳಾ ಸಬಲೀಕರಣ, ಕೌಶಲ್ಯಾಭಿವೃದ್ಧಿ ತರಬೇತಿ, ಸ್ವ ಸಹಾಯ ಸಂಘಗಳ ರಚನೆ, ಕೆರೆಗಳ ಪುನರುಜ್ಜೀವನ ಈ ಮೊದಲಾದ ಮನುವಿಕಾಸ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ದೇಶದ ಪ್ರತಿಷ್ಠಿತ ದಾನಿ ಸಂಸ್ಥೆಗಳಲ್ಲಿ ಒಂದಾದ ಈಡಲ್‌ಗೀವ್ ಫೌಂಡೇಶನ್ ಸಹಾಯ ಮತ್ತು ಸಹಕಾರವನ್ನು ನೀಡುತ್ತಿದೆ.

ಮನುವಿಕಾಸ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಲು ಈಡಲ್‌ಗೀವ್ ಫೌಂಡೇಶನ್ ಪ್ರತಿನಿಧಿಗಳು ಜುಲೈ ತಿಂಗಳ ದಿನಾಂಕ 19 ರಂದು ಆಗಮಿಸಿದ್ದರು. ಸಂಸ್ಥೆಯ ವತಿಯಿಂದ ರಚಿಸಲಾದ ಮಹಿಳಾ ಸ್ವ ಸಹಾಯ ಸಂಘಗಳಿಗೆ ಭೇಟಿ ನೀಡಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ವೀಕ್ಷಿಸಿ, ಶಿರಸಿಯ ಸೇವಾದಳ ಸಭಾಭವನದಲ್ಲಿ ಜರುಗಿದ ಸ್ವ ಸಹಾಯ ಸಂಘಗಳ ಪರಿಕಲ್ಪನಾ ತರಬೇತಿಯಲ್ಲಿ ಭಾಗವಹಿಸಿದರು. ಬಾಳೆಗದ್ದೆಯಲ್ಲಿನ ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಯ ಅಡಿಕೆ ಸಂಸ್ಕರಣಾ ಕಾರ್ಯವನ್ನು ನೋಡಿ ಸಂತಸ ವ್ಯಕ್ತಪಡಿಸಿದರು. 2023ನೇ ಸಾಲಿನಲ್ಲಿ ಹಾನಗಲ್ ತಾಲೂಕಿನ ಹರಳಕೊಪ್ಪ ಹಾಗೂ ಅರಿಶಿನಗುಪ್ಪಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಲಾದ ಕೆರೆಗಳಿಗೆ ಭೇಟಿ ನೀಡಿ ರೈತರೊಂದಿಗೆ ಸಮಾಲೋಚನೆ ನಡೆಸಿದರು.





## ಮನುವಿಕಾಸ ಸಂಸ್ಥೆಯ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ

ಮನುವಿಕಾಸ ಸಂಸ್ಥೆ ಈಡೆಲ್‌ಗೀವ್ ಫೌಂಡೇಶನ್ ಸಹಯೋಗದೊಂದಿಗೆ ಸಿದ್ದಾಪುರ ತಾಲೂಕಿನ ಕಾನಸೂರು (25/8/2023) ಮತ್ತು ಕೋಲಸಿರ್ಸಿಯಲ್ಲಿ (5/9/2023) ಮಹಿಳೆಯರಿಗಾಗಿ ಒಂದು ದಿನದ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. **"ಮನುಷ್ಯನಿಗೆ ವ್ಯಾಯಾಮ, ಒಳ್ಳೆಯ ಆಹಾರ ಪದ್ದತಿ, ಸ್ವಚ್ಛತೆ ಇವು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಹಾಯಕವಾಗುತ್ತದೆ. ಆರೋಗ್ಯದ ಕುರಿತಾದ ವಿಮೆಗಳನ್ನು ಮಾಡಿಸುವುದು ಅನುಕೂಲವಾಗುತ್ತದೆ"** ಎಂದು ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಗಣಪತಿ ಭಟ್ಟ ತಿಳಿಸಿದರು.

ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಕಾನಸೂರ ಮತ್ತು ಕೋಲಸಿರ್ಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರುಗಳು ಮತ್ತು ವೈದ್ಯಕೀಯ ಸಹಾಯಕ ಸಿಬ್ಬಂದಿಗಳು ಭಾಗವಹಿಸಿ ಮಧುಮೇಹ, ರಕ್ತದೊತ್ತಡ, ಗರ್ಭಕೋಶ ಸಂಬಂಧಿತ ಸಮಸ್ಯೆ, ಸ್ತನ ಕ್ಯಾನ್ಸರ್, ಹೃದಯ ರೋಗಗಳ ಕುರಿತಾದ ಮಾಹಿತಿಯನ್ನು ಮಹಿಳೆಯರಿಗೆ ನೀಡಿ ಆರೋಗ್ಯ ತಪಾಸಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ಮಹಿಳೆಯರು ಹಾಗೂ ಸ್ಥಳೀಯ ಗ್ರಾಮ ಪಂಚಾಯತ ಸದಸ್ಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.





## ಆತ್ಮೀಯ ಓದುಗರೇ....

**ಈ** ಬಾರಿಯ ವಾರ್ತಾ ಸಂಚಿಕೆಯನ್ನು ನಿಮ್ಮ ಮುಂದೆ ತೆರೆದಿಡಲು ಬಹಳ ಸಂತಸವೆನಿಸುತ್ತಿದೆ. ಮನುವಿಕಾಸ ಎಂಬ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಯನ್ನು ಆರಂಭಿಸಿ 20 ವರ್ಷಗಳು ಸಂದಿವೆ.

ಉತ್ತರಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಹಾಗೂ ಉಡುಪಿ ಜಿಲ್ಲೆ ಸೇರಿದಂತೆ 18 ಕ್ಕೂ ಹೆಚ್ಚು ತಾಲೂಕುಗಳಲ್ಲಿ ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣ, ಶಿಕ್ಷಣ, ಆರೋಗ್ಯ ಹಾಗೂ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಮನುವಿಕಾಸ ಸಂಸ್ಥೆಯು ತೊಡಗಿಕೊಂಡಿದ್ದು, ಮುಂದಿನ ದಿನಗಳಲ್ಲಿ ರಾಯಚೂರು, ಚಿತ್ರದುರ್ಗ, ದಾವಣಗೆರೆ ಮತ್ತು ಬೆಳಗಾವಿ ಜಿಲ್ಲೆಗಳ ಆಯ್ದ ತಾಲೂಕುಗಳಿಗೆ ಸಂಸ್ಥೆಯ ಕಾರ್ಯಚಟುವಟಿಕೆಯನ್ನು ವಿಸ್ತರಿಸುವ ಆಶಯವನ್ನು ಹೊಂದಿದ್ದೇವೆ.

ಕೆರೆಗಳು ಬಾಯಾರಿದೆ ಈ ವರ್ಷದ ಮಳೆ ಮೌನಕ್ಕೆ ಜಾರಿದೆ. ರಾಜ್ಯದ ಹಲವು ಪ್ರದೇಶಗಳಲ್ಲಿ ಮಳೆಯ ಅಭಾವದಿಂದ ಕೃಷಿ ಬದುಕು ಹದಗೆಟ್ಟಿದೆ. ವಿಶ್ವ ಸಂಸ್ಥೆಯ "**ಇನ್‌ಸ್ಟಿಟ್ಯೂಟ್ ಫಾರ್ ಎನ್ವಿರಾನ್ಮೆಂಟ್ ಡಿಸಾಸ್ಟರ್ ರಿಸ್ಕ್ ರಿಪೋರ್ಟ 2023**" ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದ ವರದಿಯಲ್ಲಿ ಇಂಡೋ ಗಂಗಾ ನದಿಗಳ ಜಲಾನಯನ ಪ್ರದೇಶಗಳ ಕೆಲ ಭಾಗಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿದೆ ಎಂಬ ಆಘಾತಕಾರಿ ಸಂಗತಿಯು ಹೊರಬಿದ್ದಿದೆ. ಭಾರತದ 1.4 ಶತ ಕೋಟಿ ಜನರು ಬೆಳೆಗಳನ್ನು ಬೆಳೆಯಲು ಶೇ 70%ರಷ್ಟು ಅಂತರ್ಜಲವನ್ನು ನಂಬಿದ್ದಾರೆ. ದೇಶದ ಎಲ್ಲಾ ಭಾಗಗಳಲ್ಲೂ ಅಂತರ್ಜಲ ಮಟ್ಟ ಕುಸಿಯುತ್ತಿದೆ ಎಂಬುದು ಗುಟ್ಟಾಗಿ ಉಳಿದಿಲ್ಲ. ನೀರಿಂಗಿಸಬೇಕು ಲಭ್ಯವಿರುವ ನೀರನ್ನು ಸಂಗ್ರಹಿಸಬೇಕು, ಹಿತಮಿತವಾಗಿ ನೀರನ್ನು ಬಳಕೆ ಮಾಡಬೇಕು. ಈ ನಿಟ್ಟಿನಲ್ಲಿ ಕೆರೆ ಪುನರುಜ್ಜೀವನ ಕಾರ್ಯ ಜಲದ ಸಮಸ್ಯೆಗೆ ಉತ್ತಮ ಪರಿಹಾರದ ದಿಕ್ಸೂಚಿ. ಈಗಾಗಲೇ ಸಂಸ್ಥೆಯು ಉತ್ತರಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ಆಯ್ದ 9 ತಾಲೂಕುಗಲ್ಲಿ 224 ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಹೂಳೆತ್ತಿ ಅಭಿವೃದ್ಧಿ ಪಡಿಸಿದ್ದು, ಹೊಸದಾಗಿ ಹೀರೆ ಕೆರೂರು, ಶಿಕಾರಿಪುರ ಹಾಗೂ ಸಾಗರ ತಾಲೂಕುಗಳನ್ನು ಕೆರೆ ಪುನರುಜ್ಜೀವನ ಯೋಜನೆಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ.

ಯೋಜನೆಗಳ ಅನುಷ್ಠಾನಕ್ಕೆ ಸಹಾಯ ಸಹಕಾರವನ್ನು ನೀಡಿದ ದಾನಿ ಸಂಸ್ಥೆಯ ಪ್ರತಿನಿಧಿಗಳು ಇತ್ತೀಚೆಗೆ ಯೋಜನೆಯ ಫಲಾನುಭವಿಗಳ ಮನೆಗಳಿಗೆ ಭೇಟಿಕೊಟ್ಟಿದ್ದಾರೆ, ಯೋಜನೆಯ ಅನುಷ್ಠಾನವನ್ನು, ಸಂಸ್ಥೆಯ ಕಾರ್ಯಚಟುವಟಿಕೆಯನ್ನು ಕಣ್ಣಾರೆ ಕಂಡಿದ್ದಾರೆ ಹಾಗೂ ಸಂಸ್ಥೆಯ ಪ್ರಧಾನ ಕಛೇರಿಗೂ ಸಹ ಭೇಟಿ ನೀಡಿದ್ದಾರೆ. ಯೋಜನೆಗಳ ಅನುಷ್ಠಾನಗಳ ಕುರಿತು ದಾನಿ ಸಂಸ್ಥೆಗಳಿಂದ ಉತ್ತಮ ಅಭಿಪ್ರಾಯವೂ ಸಹ ಸಿಕ್ಕಿದೆ. ವಹಿಸಿಕೊಂಡ ಕೆಲಸವನ್ನು ನಿಮ್ಮೆಲ್ಲರ ಸಹಕಾರದಿಂದ ಪ್ರಾಮಾಣಿಕವಾಗಿ ನಿರ್ವಹಿಸಿದ್ದೇನೆ ಎಂಬ ಸಮಾಧಾನ ನನ್ನಲ್ಲಿದೆ.

ಕಾರವಾರ, ಗೋಕರ್ಣ, ಕಾಸರಕೋಡು ಮತ್ತು ಯಲ್ಲಾಪುರಗಳಲ್ಲಿ ಮನುವಿಕಾಸ ಸಂಸ್ಥೆಯ ಸಹಕಾರದೊಂದಿಗೆ ಸ್ಥಾಪಿತಗೊಂಡ ರೈತ ಉತ್ಪಾದಕ ಕಂಪನಿಗಳು ಜನರಿಗೆ ಉತ್ತಮ ಸೇವೆಯನ್ನು ನೀಡುವಲ್ಲಿ ಶ್ರಮಿಸುತ್ತಿವೆ. ಶಿರಸಿಯ ಬಾಳೆಗದ್ದೆಯಲ್ಲಿ ಸ್ಥಾಪನೆಗೊಂಡ ಪ್ರಗತಿಮಿತ್ರ ನಾರ್ಥ್‌ಕೆನರಾ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿಯು ನನ್ನ ಆತ್ಮೀಯ ಸ್ನೇಹಿತರಾದ ವಿವೇಕ ಹೆಗಡೆಯವರ ಸಾರಥ್ಯದಲ್ಲಿ ಮುನ್ನಡೆಯುತ್ತಿದ್ದು ಈ ಬಾರಿ ನಬಾರ್ಡ ಸಂಸ್ಥೆಯು ನೀಡುವ ರಾಜ್ಯ ಮಟ್ಟದ "ಉತ್ತಮ ರೈತ ಉತ್ಪಾದಕ ಕಂಪನಿ" ಎಂಬ ಪ್ರಶಸ್ತಿಗೆ ಭಾಜನಗೊಂಡಿರುವುದು ಸಂತಸದ ಸಂಗತಿಯಾಗಿದೆ. ಇದು ನಿಮ್ಮೆಲ್ಲರ ಸಹಕಾರದಿಂದ ಸಂದ ಗೌರವ.

ಸಂಸ್ಥೆಯು ಕಳೆದ ಮೂರು ವರ್ಷಗಳಿಂದ **ಜರ್ಮನಿ ಮೂಲದ ಹನ್ಸ್ ಸೀಡಲ್ ಫೌಂಡೇಶನ್ ಇಂಡಿಯಾದ** ಸಹಯೋಗದೊಂದಿಗೆ ರೈತಾಪಿ ಸಮುದಾಯಕ್ಕಾಗಿ ಹವಾಮಾನ ಬದಲಾವಣೆಯ ಗಂಭೀರ ಪರಿಣಾಮಗಳು, ಸಮಗ್ರ ಜಲಸಂಪನ್ಮೂಲ ನಿರ್ವಹಣೆ, ದಕ್ಷ ನೀರಿನ ಬಳಕೆಯ ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ಅವುಗಳಿಗೆ ಪೂರಕವಾಗಿ ಕ್ಷೇತ್ರ ಭೇಟಿ ಸೇರಿದಂತೆ ಕೃಷಿ ವಲಯದ ಹಲವು ಆಯಾಮಗಳ ಬಗೆಗಿನ ಚಟುವಟಿಕೆಗಳನ್ನು ರೂಪಿಸಿ ಸಕ್ರಿಯವಾಗಿ ಅನುಷ್ಠಾನಗೊಳಿಸುತ್ತಿದೆ. ಪ್ರಸಕ್ತ ವರ್ಷ "ನದಿ ಪಾತ್ರದ ಪ್ರದೇಶಗಳ ನಿರ್ವಹಣೆ" ಕುರಿತಾದ ಕಾರ್ಯಾಗಾರಗಳನ್ನು ನಡೆಸಿದ್ದು ಅವುಗಳ ಕುರಿತಾದ ಸಮಗ್ರ ಮಾಹಿತಿಗಳು ಈ ಸಂಚಿಕೆಯಲ್ಲಿ ಅಡಕವಾಗಿವೆ.

ಸಂಸ್ಥೆಯ ಆರಂಭದ ದಿನದಿಂದ ಇಲ್ಲಿಯವರೆಗೆ ಕಾಲ ಕಾಲಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿ, ಬೆಂಬಲಿಸಿದ ತಮ್ಮೆಲ್ಲರಿಗೂ ನಾನು ಚಿರ ಋಣಿ. ಸಂಸ್ಥೆಯನ್ನು ಸಬಲಗೊಳಿಸಲು ನೆರವಾದ ನಿರ್ದೇಶಕ ಮಂಡಳಿ ಹಾಗೂ ಸಲಹಾ ಸಮಿತಿಯ ಸದಸ್ಯರಿಗೂ ಹಾಗೂ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಹಗಲಿರುಳೆನ್ನದೆ ಹೆಗಲಿಗೆ ಹೆಗಲುಕೊಟ್ಟು ಶ್ರಮಿಸಿದ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿಯೂ ಇದೇ ರೀತಿಯಲ್ಲಿ ನಿಮ್ಮ ಪ್ರೋತ್ಸಾಹ ಬೆಂಬಲ ಇರಲಿ ಎಂದು ಆಶಿಸುತ್ತೇನೆ.

**ಧನ್ಯವಾದಗಳೊಂದಿಗೆ,**

ಶ್ರೀ ಗಣಪತಿ ಭಟ್ಟ
**ನಿರ್ದೇಶಕರು ಮನುವಿಕಾಸ, ಶಿರಸಿ**

# ಮನುವಿಕಾಸದಿಂದ ಮಹಿಳೆಯರಿಗಾಗಿ ಸುಸ್ಥಿರ ಕೃಷಿ ತರಬೇತಿ ಹಾಗೂ ಅಧ್ಯಯನ ಪ್ರವಾಸ ಆಯೋಜನೆ

ರೈತರಿಗಾಗಿ ಸದಾ ನಾವೀನ್ಯತೆಯುಳ್ಳ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ರೂಪಿಸಿ ಅದನ್ನು ಸಕ್ರಿಯವಾಗಿ ಮನುವಿಕಾಸ ಸಂಸ್ಥೆ ಕಳೆದ ಎರಡು ದಶಕಗಳಿಂದ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಸಮುದಾಯದ ಮಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಜಾಗೃತಿಯನ್ನು ನಿರಂತರವಾಗಿ ಮೂಡಿಸುತ್ತಿದೆ.

ಸಂಸ್ಥೆಯು ಸಿಎಮ್‌ಎಸ್ ಇನ್‌ಫೋ ಸಿಸ್ಟಮ್ಸ್, ಮುಂಬೈ ಇವರ ಸಹಯೋಗದೊಂದಿಗೆ ಈಗಾಗಲೇ ಉತ್ತರಕನ್ನಡ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ 26 ಮಧ್ಯಮ ಮತ್ತು ಬೃಹತ್ ಗಾತ್ರದ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಇದರ ಮುಂದುವರೆದ ಭಾಗವಾಗಿ ಮಹಿಳೆಯರಲ್ಲಿ ಸುಸ್ಥಿರ ಕೃಷಿಯ ಪರಿಕಲ್ಪನೆಯನ್ನು ಜಾಗೃತಗೊಳಿಸಲು ಮತ್ತು ಅವರ ಕುಟುಂಬಗಳ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಲು **"ಸುಸ್ಥಿರ ಕೃಷಿ ತರಬೇತಿ ಹಾಗೂ ಅಧ್ಯಯನ ಪ್ರವಾಸವನ್ನು"** ಆಯೋಜಿಸಿತ್ತು.




## ಸುಸ್ಥಿರ ಕೃಷಿ ತರಬೇತಿ ಹಾಗೂ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಂಡ ಪ್ರಗತಿಪರ ರೈತ ಮಹಿಳೆಯರ ಸಂಖ್ಯೆ

| ಕ್ರಮ ಸಂಖ್ಯೆ | ಜಿಲ್ಲೆ | ತಾಲೂಕು | ದಿನಾಂಕ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|---|
| 1 | ಉತ್ತರ ಕನ್ನಡ | ಶಿರಸಿ | 30/03/2023 | ಹೊಟೆಲ್ ಮಧುವನ | 53 |
| | ಕೃಷಿ ಅಧ್ಯಯನ ಪ್ರವಾಸ | ಮುಂಡಗೋಡ | 31/03/2023 | ಹುಲಿಹೊಂಡ | |
| 2 | ಧಾರವಾಡ | ಕಲಘಟಗಿ | 15/04/2023 | ಹೊಟೆಲ್ ಐಶ್ವರ್ಯ ರೆಸಿಡೆನ್ಸಿ | 48 |
| | ಕೃಷಿ ಅಧ್ಯಯನ ಪ್ರವಾಸ | ಧಾರವಾಡ | 16/04/2023 | ಕೃಷಿ ವಿಜ್ಞಾನ ಕೇಂದ್ರ | |
| 3 | ಹಾವೇರಿ | ಹಾನಗಲ್ | 06/06/2023 | ನಿರೀಕ್ಷಣಾ ಮಂದಿರ | 59 |
| | ಕೃಷಿ ಅಧ್ಯಯನ ಪ್ರವಾಸ | ಯಲ್ಲಾಪುರ | 07/06/2023 | ಹೆಮ್ಮಾಡಿ | |

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿರಸಿಯ ಅರಣ್ಯ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಯಶಸ್ವಿನಿ ಶರ್ಮಾ, ಶಿರಸಿಯ ತೋಟಗಾರಿಕೆ ಇಲಾಖೆಯ ಶ್ರೀ. ಮಂಜುನಾಥ ತೋಟದ್, ಕೃಷಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾದ ಶ್ರೀ ಶಂಕರ್ ಹೆಗಡೆ, ಪ್ರಗತಿಪರ ರೈತರಾದ ಶ್ರೀಮತಿ ಅಂಜನಾ ಹೆಗಡೆ. ಸಹಾಯಕ ತೋಟಗಾರಿಕಾ ಅಧಿಕಾರಿ, ರೈತ ಸಂಪರ್ಕ ಕೇಂದ್ರ ದುಮ್ಮವಾಡ, ತೋಟಗಾರಿಕೆ ಇಲಾಖೆ ಕಲಘಟಗಿಯ ಶ್ರೀ ಕುಬೇರರೆಡ್ಡಿ ನೀಲಣ್ಣನವರ್. ಪ್ರಗತಿಪರ ಜೇನು ಕೃಷಿಕರಾದ ಶ್ರೀ.ತಿಮ್ಮಣ್ಣ ಭಟ್, ಪ್ರಗತಿಪರ ರೈತರಾದ ಶ್ರೀ ನಿಂಗಯ್ಯ ಜಿ ಹಿರೇಮಠ ಮೊದಲಾದ ವಿಷಯ ಪರಿಣತರು ಆಗಮಿಸಿದ್ದರು.

ಕೃಷಿ ಅಧ್ಯಯನ ಪ್ರವಾಸದಲ್ಲಿ ಶ್ರೀ.ಬಸವರಾಜ ನಡುವಿನಮನೆ ಹುಲಿಹೊಂಡ, ಶ್ರೀ. ಪ್ರಸಾದ ಹೆಗಡೆ ಹೆಮ್ಮಾಡಿ ಮತ್ತು ಕೃಷಿ ವಿಜ್ಞಾನ ಕೇಂದ್ರ ಧಾರವಾಡದ ಅಧಿಕಾರಿಗಳು ಸುಸ್ಥಿರ ಕೃಷಿಯ ಜೊತೆಗೆ ಪ್ರಾತ್ಯಕ್ಷಿಕೆ ಮುಖೇನ ಸಮಗ್ರ ಮಾಹಿತಿಯನ್ನು ನೀಡಿದರು.




## ಕಾರ್ಯಗಾರ ಮತ್ತು ಕೃಷಿ ಅಧ್ಯಯನ ಪ್ರವಾಸದಲ್ಲಿ ಚರ್ಚೆಯಾದ ಮುಖ್ಯ ವಿಷಯಗಳೆಂದರೆ :

* ಸುಸ್ಥಿರ ಕೃಷಿ ಮತ್ತು ಅದರ ಮಹತ್ವ.
* ಸುಸ್ಥಿರ ಕೃಷಿಯಿಂದ ಹೇಗೆ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಸಾಧ್ಯ ಎನ್ನುವದರ ಪರಿಕಲ್ಪನೆಯನ್ನು ರೈತ ಮಹಿಳೆಯರಿಗೆ ಒದಗಿಸುವುದು.
* ಪರಿಸರ ಪೂರಕ ಕೃಷಿ ಮತ್ತು ಅದರ ಪ್ರಯೋಜನಗಳು.
* ಸುಸ್ಥಿರ ಕೃಷಿಯು ಹೇಗೆ ಮಣ್ಣಿನ ಫಲವತ್ತತೆಯನ್ನು ವೃದ್ಧಿಸುವುದು ಮತ್ತು ಜೀವವೈವಿಧ್ಯತೆಯನ್ನು ಪೋಷಿಸುವುದು ಎನ್ನುವದರ ಬಗ್ಗೆ ವಿವರಣೆ ನೀಡುವುದು.
* ಸುಸ್ಥಿರ ಕೃಷಿಯಲ್ಲಿ ನೀರಾವರಿ ಪದ್ಧತಿಗಳ ಅವಲೋಕನ.
* ಕನಿಷ್ಟ ಅಥವಾ ಶೂನ್ಯ ಬೇಸಾಯದೊಂದಿಗೆ ಸುಸ್ಥಿರ ಕೃಷಿ ಚಟುವಟಿಕೆಗಳ ಅನುಷ್ಠಾನ ಹೇಗೆ?
* ಪರಿಸರ ಪೂರಕ ಸಾವಯವ ಗೊಬ್ಬರದ ಮಹತ್ವ.
* ಸುಸ್ಥಿರ ಕೃಷಿಯಲ್ಲಿ ಕೀಟ ನಿಯಂತ್ರಣ ಮತ್ತು ಸಮಗ್ರ ಕೀಟ ನಿರ್ವಹಣೆ ಪದ್ಧತಿಗಳ ಅನಾವರಣ.
* ಸುಸ್ಥಿರ ಕೃಷಿಯಲ್ಲಿ ಕಳೆ ನಿರ್ವಹಣೆ ಮತ್ತು ಕಳೆ ನಿಯಂತ್ರಣಕ್ಕೆ ಮಾರ್ಗೋಪಾಯಗಳು.
* ಜೈವಿಕ ಕೃಷಿ ಮತ್ತು ಅದರ ಮಹತ್ವ.
* ಅಣಬೆ ಕೃಷಿ ಹಾಗೂ ಗೃಹ ಉತ್ಪನ್ನಗಳಿಗೆ ಇರುವ ಬೇಡಿಕೆಗಳು.
* ಕೈತೋಟ ಮತ್ತು ಅದರ ಮಹತ್ವವನ್ನು ರೈತ ಮಹಿಳೆಯರಿಗೆ ತಿಳಿಸುವುದು.
* ಜೇನು ಕೃಷಿ ಮತ್ತು ಅದರ ಮಹತ್ವ, ಜೇನಿನ ಮೌಲ್ಯವರ್ಧಿತ ಉತ್ಪನ್ನಗಳ ಪ್ರಯೋಜನಗಳು ಮತ್ತು ಮಾರುಕಟ್ಟೆ ಲಭ್ಯತೆ.
* ತೋಟಗಾರಿಕಾ ಬೆಳೆಗಳ ಮಹತ್ವ ಮತ್ತು ಉಪಕಸುಬಿನ ಮೂಲಕ ಹೆಚ್ಚು ಆದಾಯ ಗಳಿಸುವ ಬಗೆ.
* ವೃಕ್ಷ ಆಧಾರಿತ ಕೃಷಿ ಮತ್ತು ಸಮಗ್ರ ಕೃಷಿ ಪದ್ಧತಿಗಳ ಪ್ರಯೋಜನಗಳು.





## ಕೃಷಿ ಅಧ್ಯಯನ ಕ್ಷೇತ್ರ ಭೇಟಿ ಮತ್ತು ಪಾತ್ಯಕ್ಷಿಕೆ :

ರೈತ ಮಹಿಳೆಯರಿಗೆ ಸುಸ್ಥಿರ ಕೃಷಿ ಮತ್ತು ಅದರ ಮಹತ್ವದ ಪ್ರಾತ್ಯಕ್ಷಿಕೆಯನ್ನು ನೀಡಲು ಕಾರ್ಯಾಗಾರದ ಮುಂದುವರೆದ ಭಾಗವಾಗಿ ಕೃಷಿ ಅಧ್ಯಯನ ಪ್ರವಾಸವನ್ನು ಆಯೋಜಿಸಲಾಗಿತ್ತು.

## ಈ ಅಧ್ಯಯನ ಪ್ರವಾಸದ ಆಯೋಜನೆಯ ಮುಖ್ಯ ಉದ್ದೇಶವೆಂದರೆ :

* ರೈತ ಮಹಿಳೆಯರಿಗೆ ಕೈತೋಟ ನಿರ್ಮಾಣ, ತರಕಾರಿ ಬೆಳೆಯುವಿಕೆ ಮತ್ತು ಅದರ ಮಹತ್ವವನ್ನು ತಿಳಿ ಹೇಳುವುದು.
* ಅಣಬೆ ಕೃಷಿ, ಜೇನು ಕೃಷಿಯ ಪ್ರಾತ್ಯಕ್ಷಿಕೆಯನ್ನು ಒದಗಿಸುವುದು.
* ಎರೆಹುಳು ಗೊಬ್ಬರದಂತಹ ಸಾವಯವ ಗೊಬ್ಬರ ತಯಾರಿಕೆ ಮತ್ತು ಅದರಿಂದ ಕೃಷಿ ಜಮೀನಿನಲ್ಲಾದ ಬದಲಾವಣೆಯನ್ನು ಗುರುತಿಸುವುದು.
* ಜೀವಾಮೃತ ತಯಾರಿಕೆ ಮತ್ತು ಅದರ ಮಹತ್ವ.
* ಒಂದೇ ಜಮೀನಿನಲ್ಲಿ ಮಿಶ್ರ ಬೆಳೆ ತೋಟಗಾರಿಕೆ ಬೆಳೆಗಳ ಬೆಳೆಯುವಿಕೆ ಹೇಗೆ ಎನ್ನುವದರ ವಿವರಣೆ ಮತ್ತು ವಿಶ್ಲೇಷಣೆ
* ನೀರಿಂಗಿಸುವ ಘಟಕಗಳು ಮತ್ತು ಅದರ ಪ್ರಯೋಜನವನ್ನು ತಿಳಿವುದು.
* ರೈತ ಮಹಿಳೆಯರು ಸುಸ್ಥಿರ ಕೃಷಿಯನ್ನು ಅಳವಡಿಸಿಕೊಳ್ಳುವಾಗ ಜಮೀನಿನ ಆಯ್ಕೆ ಮತ್ತು ಬೆಳೆಗಳ ಆಯ್ಕೆಯನ್ನು ಪ್ರಗತಿಪರ ರೈತರಿಂದ ಪರಸ್ಪರ ಸಂವಾದದ ಮೂಲಕ ಬಗೆಹರಿಸಿಕೊಳ್ಳುವುದು.

## ಸುಸ್ಥಿರ ಕೃಷಿಯನ್ನು ಉತ್ತೇಜಿಸಲು ಅಗತ್ಯ ಕೃಷಿ ಪರಿಕರಗಳ ವಿತರಣೆ :

ಸುಸ್ಥಿರ ಕೃಷಿಯನ್ನು ಉತ್ತೇಜಿಸಲು ಸಾವಯವ ಗೊಬ್ಬರ, ಹುಳ ಸಹಿತ ಜೇನು ಪೆಟ್ಟಿಗೆ ಮತ್ತು ವಿವಿಧ ರೀತಿಯ ಕೃಷಿ ಬೀಜಗಳನ್ನು ಆಯ್ದ 160 ಮಹಿಳೆಯರಿಗೆ ವಿತರಿಸಲಾಯಿತು.



## ಪ್ರವಾಹ ಸಂತ್ರಸ್ತರಿಗೆ ನೆರವಾದ ಮನುವಿಕಾಸ :

ಮಳೆ ಕಾಲಕ್ಕೆ ತಕ್ಕನಾಗಿ ಆಯಾ ಭೌಗೋಳಿಕ ಪ್ರದೇಶಗಳಿಗೆ ಅನುಗುಣವಾಗಿ ಸುರಿದಾಗ ಅದರಿಂದ ಯಾವುದೇ ಅತಿವೃಷ್ಟಿ ಉಂಟಾಗುವುದಿಲ್ಲ. ಅದೇ ಮಳೆ ಅಗತ್ಯಕ್ಕಿಂತ ಮಿತಿ ಮೀರಿ ಸುರಿಯಲಾರಂಭಿಸಿದಾಗ ನೆರೆ–ಪ್ರವಾಹ ಉಂಟಾಗಿ ಅನಾಹುತ ಉಂಟಾಗುವ ಸಂಭವ ಹೆಚ್ಚು. ಅದೇ ರೀತಿ ಈ ವರ್ಷದ ಜುಲೈ ತಿಂಗಳ ಆರಂಭದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಸಾಕಷ್ಟು ಅವಾಂತರಗಳೇ ಸೃಷ್ಟಿಯಾಗಿತ್ತು. ನದಿ ಮತ್ತು ಸಮುದ್ರಗಳ ತೀರ ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿತ್ತು. ನೂರಾರು ಕುಟುಂಬಗಳ ದಿನ ನಿತ್ಯದ ವಸ್ತುಗಳು ನೀರಿಗೆ ಆಹುತಿಯಾಗಿದ್ದರೆ ಹಲವಾರು ಜನರು ತಮ್ಮ ಮನೆಗಳನ್ನೂ ಸಹ ಕಳೆದುಕೊಂಡು ಊಟ ವಸತಿಗೂ ಪರಿತಪಿಸುತ್ತಿದ್ದರು.

ಮನುವಿಕಾಸ ಸಂಸ್ಥೆ ಕರ್ಜಗಿ, ಡೊನೇಟ್‌ಕಾರ್ಟ್ ಮತ್ತು ಅಮೇಜಾನ್ ಇವರುಗಳ ಸಹಯೋಗದೊಂದಿಗೆ ಕುಮಟಾ ಹಾಗೂ ಹೊನ್ನಾವರ ತಾಲೂಕಿನ ಕೆಲ ಆಯ್ದ ಗ್ರಾಮಗಳಲ್ಲಿ ನೆರೆ ಸಂತ್ರಸ್ತರಿಗೆ ಅಗತ್ಯ ಸಾಮಾಗ್ರಿಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ದಿನಾಂಕ 05/08/2023 ರಂದು ಕುಮಟಾ ತಾಲೂಕಿನ ಮಿರ್ಜಾನ್ ಗ್ರಾಮದಲ್ಲಿ ನೆರೆ ಸಂತ್ರಸ್ತರಿಗೆ ಅಗತ್ಯ ವಸ್ತುಗಳನ್ನು ವಿತರಿಸಿ ಮನುವಿಕಾಸ ಸಂಸ್ಥೆ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ, ಪ್ರತಿ ವರ್ಷ ಪ್ರವಾಹ ಬಂದಾಗ ನದಿ ತೀರದ ಜನರು ಭೀತಿಯಿಂದ ಜೀವನ ನಡೆಸುತ್ತಾರೆ, ಜೀವನದ ಉಳಿವಿನ ಭರವಸೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರದ ಮಟ್ಟದಲ್ಲಿ ಈ ಕುರಿತಾಗಿ ಗಮನ ಸೆಳೆಯುವ ಕೆಲಸವನ್ನು ಸಂಸ್ಥೆಯು ಮಾಡುತ್ತಿದೆ ಎಂದರು.



ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಕುಮಟಾ ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಎನ್.ಆರ್. ಗಜು ಮಾತನಾಡಿ ಮನುವಿಕಾಸ ಸಂಸ್ಥೆಯು ಕಳೆದ 20 ವರ್ಷಗಳಿಂದ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದು, ತೊಂದರೆಗೆ ಒಳಗಾದ ಕರಾವಳಿಗರ ನೆರವಿಗೆ ಧಾವಿಸಿದೆ ಎಂದು ಮನುವಿಕಾಸದ ಕಾರ್ಯಕ್ಕೆ ಧನ್ಯವಾದವನ್ನು ಅರ್ಪಿಸಿದರು.

ಮಿರ್ಜಾನ್, ಊರಕೇರಿ, ಕೋನಳ್ಳಿ, ಉಪ್ಪಿನ ಪಟ್ಟಣ, ದೀವಗಿ, ಬೇರೊಳ್ಳಿ, ಟೊಂಕ ಗ್ರಾಮದಲ್ಲಿ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ 190 ಕುಟುಂಬಗಳಿಗೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಕಿರಣ್ ಗೌಡ, ಗಣಪತಿ ಗಾಮದ್, ಬಾಲಚಂದ್ರ ಗೌಡ, ರಮೇಶ್ ನಾಯ್ಕ ಅಗತ್ಯ ವಸ್ತುಗಳನ್ನು ವಿತರಿಸಿದರು.



## ಮಲೆನಾಡ ರೈತರ ಮಿತ್ರ ನಮ್ಮ ಪ್ರಗತಿ ಮಿತ್ರ





ಮಲೆನಾಡಿನ ರೈತರಿಗೆ ಪ್ರಗತಿ ಮಿತ್ರ ರೈತ ಉತ್ಪಾದಕ ಕಂಪನಿ ಕಳೆದ ಐದಾರು ವರ್ಷಗಳಿಂದ ಚಿರ ಪರಿಚಿತ. ಕೊನೆ ಕೊಯ್ಲಿನ ಸಂದರ್ಭದಲ್ಲಿ ಕಾರ್ಮಿಕರ ಕೊರತೆಯು ಸಾರ್ವಕಾಲಿಕವಾಗಿ ಕಂಡುಬರುವ ಸಮಸ್ಯೆಗಳಲ್ಲಿ ಒಂದು. ಹೌದು, ಇಂತಹ ಸಮಸ್ಯೆಯನ್ನು ನಿವಾರಿಸಿ ರೈತರಿಗೆ ನೆರವಾಗಲು 2016 ರಲ್ಲಿ ಶ್ರೀ ಹರಿಶ್ಚಂದ್ರ ಭಟ್ಟ, ಶ್ರೀ ಗಣಪತಿ ಭಟ್ಟ ಹಾಗೂ ಮನುವಿಕಾಸ ಸ್ವಯಂ ಸೇವಾ ಸಂಸ್ಥೆ ಸಹಕಾರದೊಂದಿಗೆ ಶ್ರೀ ವಿವೇಕ ಹೆಗಡೆ ಬಾಳೆಗದ್ದೆ ಇವರ ನೇತೃತ್ವದಲ್ಲಿ ಬಾಳೆಗದ್ದೆಯ ವಿಶಾಲವಾದ ಜಾಗದಲ್ಲಿ ತಲೆ ಎತ್ತಿ ನಿಂತಿದ್ದೇ "ಪ್ರಗತಿ ಮಿತ್ರ ರೈತ ಉತ್ಪಾದಕ ಕಂಪನಿ".

ಅಡಿಕೆ ಕೊಯ್ಲಿನ ಸಂದರ್ಭದಲ್ಲಿ ಅಡಿಕೆ ಸುಲಿದು, ಒಣಗಿಸಿ, ಆರಿಸಿ ಮಾರುಕಟ್ಟೆಗೆ ಮಹಸೂಲನ್ನು ಮಾರಾಟ ಮಾಡುವವರೆಗೆ ಸಂಸ್ಕರಣಾ ಕೆಲಸವನ್ನು ಮಾಡಿಕೊಟ್ಟು ರೈತರಿಗೆ ನೆರವಾಗುತ್ತಿದೆ. ಇದರಿಂದ ಸ್ಥಳೀಯ ಜನರಿಗೂ ಸಹ ಕೆಲಸ ದೊರೆತಂತಾಗಿದೆ. ಕೃಷಿಕ ಸಮೂಹವು ರೈತ ಉತ್ಪಾದಕ ಕಂಪನಿಯ ಕಾರ್ಯವನ್ನು ಮೆಚ್ಚಿಕೊಂಡಿದೆ.

ಪ್ರಗತಿಮಿತ್ರ ರೈತ ಉತ್ಪಾದಕ ಕಂಪನಿಯು ಇದೀಗ ಮತ್ತೊಂದು ಗರಿಮೆಗೆ ಪಾತ್ರವಾಗಿದ್ದು, ದಿನಾಂಕ 18/07/2023 ರಂದು ಬೆಂಗಳೂರಿನಲ್ಲಿ ಜರುಗಿದ ನಬಾರ್ಡ್‌ನ 42ನೇಯ ಸಂಸ್ಥಾಪನಾ ದಿನದಂದು ಪ್ರಗತಿ ಮಿತ್ರ ನಾರ್ತ್ ಕೆನರಾ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿಯು ಕರ್ನಾಟಕದ “ಅತ್ಯುತ್ತಮ ರೈತ ಉತ್ಪಾದಕ ಕಂಪನಿ” ಎಂಬ ಪ್ರಶಸ್ತಿಗೆ ಭಾಜನಗೊಂಡಿದೆ. ವ್ಯವಸ್ಥಾಪಕ ನಿರ್ದೇಶಕರಾದ ವಿವೇಕ ಹೆಗಡೆ ಬಾಳೆಗದ್ದೆ, ನಿರ್ದೇಶಕ ಮಂಡಳಿ ಸದಸ್ಯರಾದ ಕೇಶವ ಜೋಶಿ ಹಾಗೂ ಸಂಸ್ಥೆಯ ಸಿಬ್ಬಂದಿ ಪ್ರಜ್ವಲ್ ಹೆಗಡೆ ಪ್ರಶಸ್ತಿಯನ್ನು ಸ್ವೀಕರಿಸಿದರು. ಈ ಸಮಾರಂಭದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಎಸ್.ವಿ. ಸುರೇಶ್, ನಬಾರ್ಡ್‌ನ ಪ್ರಧಾನ ವ್ಯವಸ್ಥಾಪಕರಾದ ಟಿ.ರಮೇಶ್ ಉಪಸ್ಥಿತರಿದ್ದರು. ಪ್ರಗತಿ ಮಿತ್ರ ರೈತ ಉತ್ಪಾದಕ ಕಂಪನಿಗೆ ಕಳೆದ ವರ್ಷ “ಕೃಷಿ ಅಲರ್ಟ್” ಎಂಬ ರಾಷ್ಟ್ರ ಮಟ್ಟದ ಪ್ರಶಸ್ತಿಯೂ ಸಹ ಲಭಿಸಿರುವುದು ಹೆಮ್ಮೆಯ ಸಂಗತಿ.

# ಮನುವಿಕಾಸ ಸಂಸ್ಥೆಯ ಕಾರ್ಯಕ್ಕೆ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಶ್ಲಾಘನೆ



ಮನುವಿಕಾಸ ಮತ್ತು ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪರಿವರ್ತನ ಇವರ ಸಹಯೋಗದೊಂದಿಗೆ ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಉಪ್ಪುಂದದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಸಭಾಭವನದಲ್ಲಿ ದಿನಾಂಕ 20/06/2023 ರಂದು ರೈತ ಉತ್ಪಾದಕ ಕಂಪನಿಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿ "ಸಂಸ್ಥೆಯು ಕಳೆದ ಒಂದುವರೆ ವರ್ಷದಿಂದ ಕುಂದಾಪುರ ಹಾಗೂ ಬೈಂದೂರು ತಾಲೂಕಿನಲ್ಲಿ 75 ಕ್ಕೂ ಹೆಚ್ಚು ಮಹಿಳಾ ಸ್ವ ಸಹಾಯ ಸಂಘಗಳನ್ನು ರಚಿಸಿ, 30 ಮಹಿಳೆಯರಿಗೆ ಸ್ವ ಉದ್ಯೋಗದ ಪರಿಕರಗಳನ್ನು ನೀಡಿ ಸ್ವಾವಲಂಬಿಗಳನ್ನಾಗಿಸಿದೆ. ಪಂಜರು ಮೀನು ಕೃಷಿಗೆ ಉತ್ತೇಜನ ಹಾಗೂ 20 ಸಂಘಗಳಿಗೆ ಸಹಾಯಕವಾಗುವ ಒಣ ಮೀನು ಘಟಕಗಳ ಸ್ಥಾಪನೆ ಮಾಡಿದೆ. ಉತ್ತಮ ರೀತಿಯಲ್ಲಿ ಸಂಘಗಳನ್ನು ಮುನ್ನಡೆಸಿಕೊಂಡು ಹೋಗಲು ಪರಿಕಲ್ಪನಾ ತರಬೇತಿ ಮತ್ತು ಸಂಘದ ನಿರ್ವಹಣೆ ಮಾಡುವ ಸದಸ್ಯರಿಗೆ ಪುಸ್ತಕ ನಿರ್ವಹಣಾ ತರಬೇತಿಗಳನ್ನು ನೀಡಿದೆ. ಸಂಸ್ಥೆಯ ಸಹಾಯ ಪಡೆದು ಸ್ವ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ, ರೈತ ಉತ್ಪಾದಕ ಕಂಪನಿಯಲ್ಲಿ ಪಾಲ್ಗೊಳ್ಳಲು ಇಚ್ಚಿಸಿರುವ 20 ಜನ ಸದಸ್ಯರಿಗೆ ಕೇರಳದ ಮೀನು ಸಂಸ್ಕರಣಾ ಮತ್ತು ಮೌಲ್ಯವರ್ಧನಾ ಕೇಂದ್ರಗಳಿಗೆ ಕರೆದೊಯ್ದು ನಾಲ್ಕು ದಿನಗಳ ಅಧ್ಯಯನ ಪ್ರವಾಸವನ್ನು ಆಯೋಜಿಸಿತ್ತು.

ರೈತ ಉತ್ಪಾದಕ ಕಂಪನಿಯ ಪೂರ್ವಭಾವಿ ಸಭೆಯನ್ನು ಆಯೋಜಿಸಲು ಮುಖ್ಯ ಕಾರಣವೆಂದರೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಹೊನ್ನಾವರದ ಕಾಸರಕೋಡಿನಲ್ಲಿ FPO ಸ್ಥಾಪಿಸಿ ಅನೇಕ ಚಟುವಟಿಕೆಗಳನ್ನು ಕೈಗೊಂಡಿದ್ದೇವೆ. ಅದೇ ರೀತಿಯಲ್ಲಿ ಬೈಂದೂರು ತಾಲೂಕಿನಲ್ಲೂ ಸಹ ಮಹಿಳಾ ಮೀನು ಮಾರಾಟಗಾರರನ್ನೇ ಸಂಘಟಿಸಿ ತಮ್ಮದೇ ಆದಂತಹ ರೈತ ಉತ್ಪಾದಕ ಕಂಪನಿಯನ್ನು ಸ್ಥಾಪಿಸಿ ಅಗತ್ಯ ಸೇವೆಗಳನ್ನು ಒದಗಿಸುವ ಇಚ್ಛೆಯನ್ನು ಹೊಂದಿದ್ದು, ತಾವೆಲ್ಲರೂ ಇದನ್ನು ಬೆಂಬಲಿಸಿ, ಪ್ರೋತ್ಸಾಹಿಸಿ ಶೇರುದಾರರಾಗಿ" ಎಂದು ಕರೆ ನೀಡಿದರು.

ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಗುರುರಾಜ್ ಗಂಟಿಹೊಳೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ "ಮನುವಿಕಾಸ ಸಂಸ್ಥೆಯು ನಮ್ಮ ತಾಲೂಕಿನಲ್ಲಿ ಮೀನು ಮಾರಾಟ ಮಾಡುವ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದೆ. ಮೀನು ಸಂಸ್ಕರಣಾ ಪೆಟ್ಟಿಗೆ, ಒಣ ಮೀನು ಘಟಕಗಳನ್ನು ನೀಡಿರುವುದು ಶ್ಲಾಘನೀಯ ಎಂದರು. ದೂರದ ಉತ್ತರ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಗೆ ಬಂದು ಮೀನುಗಾರರ ಒಳಿತಿಗಾಗಿ ಕೆಲಸ ಮಾಡುತ್ತಿರುವುದು ಸಂತಸದ ಸಂಗತಿಯಾಗಿದ್ದು, ಸಂಸ್ಥೆಗೆ ಸರ್ಕಾರದ ವತಿಯಿಂದ ಸಿಗಬೇಕಾದ ನೆರವನ್ನು ಒದಗಿಸಲು ನಾವು ಸಿದ್ಧರಿದ್ದೇವೆ. ಜನರು ರೈತ ಉತ್ಪಾದಕ ಕಂಪನಿಯ ಪ್ರಯೋಜನವನ್ನು ಪಡೆದುಕೊಳ್ಳಿ" ಎಂದು ಹೇಳಿದರು.



ಈ ಸಭೆಯಲ್ಲಿ ಉಪ್ಪುಂದ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಗ್ರಾ.ಪಂ ಸದಸ್ಯರು ಉಪಸ್ಥಿತರಿದ್ದರು. 350 ಕ್ಕೂ ಅಧಿಕ ಮಹಿಳೆಯರು ಪಾಲ್ಗೊಂಡು ರೈತ ಉತ್ಪಾದಕ ಕಂಪನಿಯ ರೂಪುರೇಷೆಯನ್ನು ತಿಳಿದುಕೊಂಡರು. ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಸಹ ಪಾಲ್ಗೊಂಡಿದ್ದರು.

# ಕುಂದಾಪುರ ಸ್ವ ಸಹಾಯ ಸಂಘದ ಮಹಿಳೆಯರಿಗೆ ಅಧ್ಯಯನ ಪ್ರವಾಸ ಆಯೋಜನೆ











ಮನುವಿಕಾಸ ಸಂಸ್ಥೆ ಮತ್ತು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದೊಂದಿಗೆ ಕುಂದಾಪುರ ತಾಲೂಕಿನ ಮೀನುಗಾರರ ಸ್ವ ಸಹಾಯ ಸಂಘದ ಮಹಿಳೆಯರಿಗೆ ಹಾಗೂ ರೈತ ಉತ್ಪಾದಕ ಕಂಪನಿಯ ಆಸಕ್ತ ಸದಸ್ಯರಿಗೆ ಕೇರಳದ ಎರ್ನಾಕುಲಂಗೆ ಎರಡು ದಿನದ ಅಧ್ಯಯನ ಪ್ರವಾಸವನ್ನು 2023ರ ಜೂನ್ 22 & 23 ರಂದು ಆಯೋಜಿಸಲಾಗಿತ್ತು.

ಸದಸ್ಯರು ಕೇರಳದ ಎರ್ನಾಕುಲಂನ ಮೀನಿನ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಸಂಬಂಧಿಸಿದ National Institute of Fisheries Post Harvest Technology and Training (NIFPHATT) ಸಂಸ್ಥೆಗೆ ಭೇಟಿ ನೀಡಿದರು. ಸಂಸ್ಥೆಯ ಪ್ರಮುಖ ವಿಭಾಗಗಳಾದ Canning, Freezing, Fish Processing Unit, Drying Unit ಗಳಿಗೆ ಭೇಟಿ ನೀಡಿ ಅಲ್ಲಿಯ ಕಾರ್ಯ ಚಟುವಟಿಕೆಗಳನ್ನು (ಸ್ವ ಸಹಾಯ ಸಂಘದ ಮಹಿಳೆಯರು) ವೀಕ್ಷಿಸಿದರು. ಮುಖ್ಯವಾಗಿ Canning ವಿಭಾಗದಲ್ಲಿ ಸಂಸ್ಕರಿಸಿದ ಮೀನುಗಳು ಹಾಗೂ Ready to Eat ಪದಾರ್ಥಗಳು ಮತ್ತು ಮೀನುಗಳನ್ನು ಶೀಥಲೀಕರಣಗೊಳಿಸಿ ಅವುಗಳನ್ನು ಅಚ್ಚುಕಟ್ಟಾಗಿ ಸಂಸ್ಕರಿಸಿ ಪ್ಯಾಕಿಂಗ್ ಮಾಡಿ ಮಾರುಕಟ್ಟೆಗೆ ತಲುಪಿಸುವ ಕಾರ್ಯವೈಖರಿಯನ್ನು NIFPHATT ಸಂಸ್ಥೆಯ ಸಿಬ್ಬಂದಿ ಶ್ರೀ ನಿತಿನ್ ಅವರಿಂದ ಮಾಹಿತಿ ಪಡೆದರು.

Central Institute Of Fisheries Technology ಸಂಸ್ಥೆಗೆ ಭೇಟಿ ನೀಡಿ ಮೀನಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ಯಂತ್ರೋಪಕರಣಗಳ ಮೂಲಕ ತಯಾರಿಸುವ ವಿಧಾನವನ್ನು ವೀಕ್ಷಿಸಿ ಮೀನಿನ ಉಪ್ಪಿನಕಾಯಿ ಹಾಗೂ ಒಣ ಮೀನಿನ ತಿನಿಸುಗಳ ತಯಾರಿಕೆ ಪ್ರಾತ್ಯಕ್ಷಿಕೆಯನ್ನು ಸಹ ನೋಡಿ ಮಾಹಿತಿಯನ್ನು ಸಂಘದ ಮಹಿಳೆಯರು ಪಡೆದರು. ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ್ ಬೊಮ್ಮನಹಳ್ಳಿ, ಗೀತಾ ಪಂಡಿತ, ಮಿಥುನ್ ನಾಯ್ಕ, ನವೀನ್ ನಾಯ್ಕ ಸಹ ಅಧ್ಯಯನದಲ್ಲಿ ಪಾಲ್ಗೊಂಡಿದ್ದರು.

## ಸಿದ್ಧಿಸಿರಿ ರೈತ ಉತ್ಪಾದಕ ಸಂಘದ ಸದಸ್ಯರಿಗೆ ಅಧ್ಯಯನ ಪ್ರವಾಸ ಆಯೋಜನೆ

ಯಲ್ಲಾಪುರದ ಸಿದ್ದಿ ಬುಡಕಟ್ಟು ಜನಾಂಗದವರ ಅಭಿವೃದ್ಧಿಗಾಗಿ ಮನುವಿಕಾಸ ಸಂಸ್ಥೆಯು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ವಿಶೇಷ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಾ ಬಂದಿದೆ. ಸಿದ್ದಿ ಸಮುದಾಯದವರಿಗೆ ರೈತ ಉತ್ಪಾದಕ ಕಂಪನಿಯನ್ನು ರಚಿಸಿದ್ದು, ಆಡಳಿತ ಮಂಡಳಿಯ ಸದಸ್ಯರಿಗೆ ಮನುವಿಕಾಸ ಸಂಸ್ಥೆಯು ಅಧ್ಯಯನ ಪ್ರವಾಸವನ್ನು ಆಯೋಜಿಸಿತ್ತು.

ಈ ಸಂದರ್ಭದಲ್ಲಿ ತಮಿಳುನಾಡಿನ ಕೊಯಮುತ್ತೂರಿನ ಬಂಗಾಲಪಾಡಿ ಗ್ರಾಮದ ಆದಿಮಲೈ ಎಂಬ ಬುಡಕಟ್ಟು ಜನಾಂಗದವರು ನಡೆಸುತ್ತಿರುವ ಆದಿಮಲೈ ರೈತ ಉತ್ಪಾದಕ ಕಂಪನಿಗೆ ಭೇಟಿ ನೀಡಿದರು. ಈ ಕಂಪನಿಯು ಸ್ಥಳೀಯವಾಗಿ ದೊರೆಯುವ ನೆಲ್ಲಿಕಾಯಿ, ಶೀಗೆಕಾಯಿ, ಬೇವು, ತೆಂಗು ಈ ಮೊದಲಾದ ಉತ್ಪನ್ನವನ್ನು ಬಳಸಿ ಸಂಸ್ಕರಿಸಿ,ಮೌಲ್ಯವರ್ಧಿತ ಉತ್ಪನ್ನವನ್ನಾಗಿಸಿ ಮಾರುಕಟ್ಟೆಗೆ ತರುತ್ತಿದೆ. ಸಂಪನ್ಮೂಲವನ್ನು ಬಳಸಿ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯ ಕುರಿತಾದ ಮಾಹಿತಿಯನ್ನು ಆಡಳಿತ ಮಂಡಳಿಯ ಸದಸ್ಯರು ತಿಳಿದುಕೊಂಡರು. ಕೋತುಗಿರಿ ಗ್ರಾಮದ ಕೋತುಗಿರಿ ರೈತ ಉತ್ಪಾದಕ ಕಂಪನಿಗೆ ಭೇಟಿ ನೀಡಿದರು. ಚಹಪುಡಿ, ಉಪ್ಪಿನಕಾಯಿ, ಜೇನಿನ ಕುರಿತಾದ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯ ಕುರಿತು ಮಾಹಿತಿ ಪಡೆದು ನಾವು ಸಹ ನಮ್ಮ ಹಳ್ಳಿಯಲ್ಲಿ ಮೌಲ್ಯವರ್ಧಿತ ಉತ್ಪನ್ನವನ್ನು ತಯಾರಿಸುವ ಇಂಗಿತವನ್ನು ವ್ಯಕ್ತಪಡಿಸಿದರು.



## ಮನುವಿಕಾಸ ಹಾಗೂ ಹೆಚ್.ಡಿ.ಎಫ್.ಸಿ ಪರಿವರ್ತನ್ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿ

| | | | |
|---|---|---|---|
| ಯಲ್ಲಾಪುರ | ಚಂದನಾ ನಾಯ್ಕ | ಯೋಜನಾ ಅಧಿಕಾರಿ | 80737 16524 |
| | ಪವನ್ ಬೊಮ್ಮನಹಳ್ಳಿ | ವ್ಯಾಪಾರ ಅಭಿವೃದ್ಧಿ ಅಧಿಕಾರಿ | 72043 05775 |
| | ಕಿರಣ್‌ಕುಮಾರ ಗೌಡ | ವಲಯ ಸಂಯೋಜಕರು | 94824 86207 |
| | ವಿಲ್ಸನ್ ಡಿಸೋಜಾ ಸಿದ್ದಿ | ಕ್ಷೇತ್ರ ಸಂಯೋಜಕರು | 88927 71312 |
| | ರಾಮಚಂದ್ರ ಸಿದ್ದಿ | ಕ್ಷೇತ್ರ ಸಂಯೋಜಕರು | 82775 30941 |
| ಕುಂದಾಪುರ | ಮಿಥುನ್ ನಾಯ್ಕ | ವಲಯ ಸಂಯೋಜಕರು | 95352 71298 |
| | ನವೀನ್ ನಾಯ್ಕ | ಕ್ಷೇತ್ರ ಸಂಯೋಜಕರು | 94831 33650 |
| | ಗೀತಾ ನಿಲೇಕಣಿ | ಕ್ಷೇತ್ರ ಸಂಯೋಜಕರು | 91482 75849 |

## ಸಿದ್ದಿಗಳ ಅಭಿವೃದ್ಧಿಗೆ ಸಿಹಿ ತರಲಿದೆ "ಸಿದ್ದಿ - ಸಿರಿ"

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಹೆಚ್.ಡಿ.ಎಫ್.ಸಿ ಬ್ಯಾಂಕ್ ಪರಿವರ್ತನ ಇವರ ಸಹಯೋಗದಲ್ಲಿ ಯಲ್ಲಾಪುರ ಪಟ್ಟಣದ ರೈತ ಸಭಾಭವನದಲ್ಲಿ ದಿನಾಂಕ 27/06/2023 ರಂದು ಸಿದ್ದಿ ಮಹಿಳಾ ರೈತ ಉತ್ಪಾದಕ ಸಂಘದ ಸ್ಥಾಪನೆಯ ಪೂರ್ವಭಾವಿ ಸಭೆಯನ್ನು ಆಯೋಜಿಸಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಸಭೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ, ಸಿದ್ದಿ ಮಹಿಳೆಯರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ "ಸಿದ್ದಿ ಸಿರಿ ರೈತ ಉತ್ಪಾದಕ ಕಂಪನಿ" ಸ್ಥಾಪಿಸಲು ಯೋಜಿಸಲಾಗಿದೆ ಸಿದ್ದಿ ಸಮುದಾಯಕ್ಕೆ ಬೇಕಾದ ಕೌಶಲ್ಯ ಆಧಾರಿತ ತರಬೇತಿ, ಆದಾಯ ಉತ್ಪನ್ನಗಳ ಮೌಲ್ಯವರ್ಧನೆ, ಗೃಹೋದ್ಯಮ, ಹೈನುಗಾರಿಕೆ ಮೊದಲಾದ ತರಬೇತಿಗಳನ್ನು ಈಗಾಗಲೇ ಒದಗಿಸಲಾಗಿದ್ದು ಇದರ ಸಮಗ್ರ ಪ್ರಯೋಜನವನ್ನು ಸಮುದಾಯ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಯಲ್ಲಾಪುರ–ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ ಮಾತನಾಡಿ ಸಮುದಾಯದ ಮಟ್ಟದಲ್ಲಿ ಜಾಗೃತಿ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆ ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿದೆ. ಈಗ ಸಿದ್ದಿ ಸಮುದಾಯದ ಅಭಿವೃದ್ಧಿಗೆ ಬೇಕಾದ ಎಲ್ಲ ಪೂರ್ವ ತಯಾರಿಯನ್ನು ನಡೆಸಿ ಅವರದೇ ಆದ ರೈತ ಉತ್ಪಾದಕ ಸಂಘದ ಸ್ಥಾಪನೆಗೆ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಉಚ್ಚ ನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ಜೈರಾಮ ಸಿದ್ದಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, "ರಾಜ್ಯದಲ್ಲಿ 51 ಪರಿಶಿಷ್ಟ ಜಾತಿಗಳ ಜನರಿದ್ದು ನಾವು ಸಂಘಟಿತ ಹೋರಾಟದ ಮೂಲಕ ನಮಗೆ ಸಿಗಬೇಕಾದ ಸೌಲಭ್ಯವನ್ನು ಪಡೆಯಬೇಕಾಗಿದೆ. ಶಿಕ್ಷಣದಲ್ಲಿ ಹಿಂದುಳಿದಿರುವುದೂ ನಾವು ಸೌಲಭ್ಯಗಳಿಂದ ವಂಚಿತರಾಗಲು ಕಾರಣವಾಗಿದೆ.ಸಿದ್ದಿ ಬುಡಕಟ್ಟು ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದರೂ ತಮಗೆ ನ್ಯಾಯವಾಗಿ ಸಿಗಬೇಕಿದ್ದ ಹಕ್ಕುಗಳಿಂದ, ರಾಜಕೀಯ ಪ್ರಾತಿನಿಧ್ಯದಿಂದ, ಸರಕಾರದ ವಿವಿಧ ಸವಲತ್ತುಗಳಿಂದ ವಂಚಿತರಾಗಿದ್ದಾರೆ" ಎಂದು ವಿಷಾದಿಸಿದರು.

ಸಿದ್ದಿ ಸಮುದಾಯದ 300 ಕ್ಕೂ ಹೆಚ್ಚು ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ತಾಲೂಕು ಪಂಚಾಯತಿ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಸುಜಾತಾ ಸಿದ್ದಿ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಕೃಷಿ ನಿರ್ದೇಶಕ ಶ್ರೀ ನಾಗರಾಜ ನಾಯ್ಕ, ಆತ್ಮಾಯೋಜನೆಯ ವ್ಯವಸ್ಥಾಪಕ ಶ್ರೀ ಎಂ.ಜಿ.ಭಟ್ಟ, ಶ್ರೀ ಕೃಷ್ಣ ನಾಯ್ಕ ಕೃಷಿ ಇಲಾಖೆಯ ವಿವಿಧ ಯೋಜನೆಗಳನ್ನು ವಿವರಿಸಿದರು. ಪ್ರಗತಿ ಮಿತ್ರ ರೈತ ಉತ್ಪಾದಕ ಸಂಘದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿವೇಕ ಹೆಗಡೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.

ಇತ್ತೀಚಿನ ದಿನಗಳಲ್ಲಿ ರೈತರು ತಮ್ಮ ಬೇಸಾಯ ಪದ್ಧತಿಯಲ್ಲಿ ಮಿಶ್ರ ಕೃಷಿಯನ್ನು ಮಾಡುವುದರೊಟ್ಟಿಗೆ ಜೇನು ಕೃಷಿಯತ್ತ ಒಲವು ತೋರುತ್ತಿದ್ದಾರೆ. ನಿಜಕ್ಕೂ ಇದೊಂದು ಸಂತಸದ ಸಂಗತಿ.

ಈ ಹಿಂದೆ ಜೇನನ್ನು ಪೆಟ್ಟಿಗೆಯಲ್ಲಿ ಸಾಕಿ ತುಪ್ಪವನ್ನು ತೆಗೆಯುವ ಪರಿಪಾಠ ನಮ್ಮಲ್ಲಿ ಇರಲಿಲ್ಲ ನೋಡಿ, ಕಾಡಲ್ಲಿ ಯಥೇಚ್ಛವಾಗಿ ಸಿಗುತ್ತಿತ್ತು. ಆಧುನಿಕತೆಯಿಂದಲೋ ಇನ್ನಿತರ ಕಾರಣಗಳಿಂದಲೋ ಕಾಡು ಜೇನಿನ ಸಂತತಿ ಕೊಂಚ ಕಣ್ಮರೆಯಾಗಿದೆ. ಆಧುನಿಕ ಜೇನು ಸಾಕಾಣಿಕೆಯಲ್ಲಿ ಜೇನುಹುಳುಗಳು ಬೆಚ್ಚಗೆ ಮರದ ಪೆಟ್ಟಿಗೆಯೊಳಗೆ ಬಂದು ಕೂತಿವೆ. ಮಾರುಕಟ್ಟೆಯಲ್ಲಿ ಜೇನು ಪೆಟ್ಟಿಗೆಯೊಂದು 3500 ದಿಂದ 5000 ರೂ ಗಳವರೆಗೂ ಲಭ್ಯವಿದೆ. ಅಧ್ಯಯನದ ಪ್ರಕಾರ 10,000ಕ್ಕಿಂತ ಅಧಿಕ ನಮೂನೆಯ ಜೇನು ತಳಿಗಳು ಜಗತ್ತಿನಲ್ಲಿವೆ.

ಮಳೆಗಾಲದಲ್ಲಿ ಜೇನು ಹುಳುಗಳನ್ನು ನಿರ್ವಹಣೆ ಮಾಡುವುದು, ಇರುವೆಗಳಿಂದ ರಕ್ಷಿಸುವುದು, ವರ್ಷಕ್ಕೊಮ್ಮೆ ಪೆಟ್ಟಿಗೆಗಳನ್ನು ಸ್ವಚ್ಛ ಮಾಡುವುದು ಉತ್ತಮ ನಿರ್ವಹಣಾ ಕಾರ್ಯವಾಗಿದೆ. ಒಂದು ವರ್ಷಕ್ಕೆ ಜೇನು ಪೆಟ್ಟಿಗೆಯೊಂದರಿಂದ ಸರಾಸರಿ 5000 ಕ್ಕೂ ಮೇಲ್ಪಟ್ಟ ಆದಾಯವನ್ನು ಪಡೆಯಬಹುದು ಎಂಬುದು ರೈತರ ಅಭಿಪ್ರಾಯವಾಗಿದೆ.

## ಜೇನಿಗೂ ಕೃಷಿಗೂ ಏನ್ ಸಂಬಂಧ?

ಹೌದು, ಕೃಷಿಗೂ ಜೇನು ಹುಳುಗಳಿಗೂ ಒಂದು ರೀತಿ ಹತ್ತಿರದ ಸಂಬಂಧವೇ ಇದೆ, ಯಾಕೆ ಗೊತ್ತಾ? ಪರಾಗಸ್ಪರ್ಶ ಕಾರ್ಯದಲ್ಲಿ ಜೇನುನೋಣಗಳು ಎತ್ತಿದ ಕೈ. ಕೃಷಿ ಬೆಳೆಗಳ ಹೂವುಗಳ ಮಕರಂದ ಹೀರುವುದರೊಟ್ಟಿಗೆ ಪರಾಗ ಸ್ಪರ್ಶ (ಪಾಲಿನೇಶನ್) ಸಹ ಮಾಡಿ ಹೋಗುತ್ತವೆ. ಇದರಿಂದಾಗಿ ಕೃಷಿಯಲ್ಲಿ ಇಳುವರಿಯ ಪ್ರಮಾಣವೂ ಸಹ ಹೆಚ್ಚಳವಾಗಲು ಸಹಾಯಕವಾಗಿದೆ. ಸಾಮಾನ್ಯವಾಗಿ ಜೇನುನೊಣಗಳು ಪೆಟ್ಟಿಗೆಯಿಂದ (ಗೂಡಿನಿಂದ) 2 ಕಿ.ಮೀ ಸುತ್ತಳತೆಯ ವ್ಯಾಪ್ತಿಯಲ್ಲಿ ಲಭ್ಯವಿರುವ ಆಹಾರ ಸಂಗ್ರಹಿಸಿ ಗೂಡಿನಲ್ಲಿ ತುಪ್ಪವನ್ನು ಉತ್ಪತ್ತಿ ಮಾಡುತ್ತವೆ.

## ಪರಿಶುದ್ಧ ಜೇನಿಗಿದೆ ಭಾರಿ ಬೇಡಿಕೆ

ಸೌಂದರ್ಯ ವರ್ಧಕ ಉತ್ಪನ್ನ, ಅಜೀರ್ಣ ನಿವಾರಣೆ, ತೂಕ ಇಳಿಸಲು, ಔಷಧಿಗಳಿಗೆ ಹೀಗೆ ನಾನಾ ರೂಪದಲ್ಲಿ ಜೇನು ತುಪ್ಪವನ್ನು ಬಳಸಲಾಗುತ್ತಿದ್ದು, ಬೇಡಿಕೆಯೂ ಸಹ ಬಹಳಷ್ಟಿದೆ. ಆತ್ಮ ನಿರ್ಭರ ಭಾರತ್ ಯೋಜನೆಯ ಅಡಿಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರೆತಿದೆ. ಮಾರುಕಟ್ಟೆಯಲ್ಲಿ ಒಂದು ಕೆಜಿ ಜೇನು ತುಪ್ಪಕ್ಕೆ ಸರಾಸರಿ 500 ರಿಂದ 600 ರೂಪಾಯಿ ಮೌಲ್ಯವಿದೆ. ಒಂದು ಪೆಟ್ಟಿಗೆಯಿಂದ ವರ್ಷಕ್ಕೆ ಸರಾಸರಿ 5 ರಿಂದ 10 ಕೆ.ಜಿ.ಯವರೆಗೆ ಗರಿಷ್ಠ 15 ಕೆ.ಜಿ ವರೆಗೂ ಸಹ ತುಪ್ಪವನ್ನು ಪಡೆಯಬಹುದಾಗಿದೆ ಎಂದು ಅನುಭವಿ ರೈತರು ಹೇಳುತ್ತಾರೆ. ಅದೇ ರೀತಿ ಜೇನು ಮೇಣಕ್ಕೂ ಸಹ ಉತ್ತಮ ಬೇಡಿಕೆ ಇದೆ ಎಂಬುದು ತಜ್ಞರ ಅಭಿಪ್ರಾಯವಾಗಿದೆ..

## ಮಲೆನಾಡಲಿ ಟ್ರೆಂಡ್ ಆದ "ಮಧು"

ಜೇನಿಗಿರುವ ಮತ್ತೊಂದು ಹೆಸರೇ ಮಧು. ಮಲೆನಾಡಿನ ಭಾಗಗಳಲ್ಲಿ ಇತ್ತೀಚೆಗೆ ಜೇನು ಕೃಷಿ ಸಖತ್ ಸುದ್ದಿಯಲ್ಲಿದ್ದು, ಕೃಷಿ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆಯವರು ವಿವಿಧ ತರಬೇತಿಯನ್ನು ನೀಡುವುದರೊಟ್ಟಿಗೆ ಪೆಟ್ಟಿಗೆಗಳಿಗೆ ಸಬ್ಸಿಡಿಯನ್ನು ಸಹ ನೀಡುತ್ತಿದ್ದಾರೆ. ಹಲವು ಪ್ರಗತಿ ಪರ ರೈತರೂ ಜೇನುಗೂಡುಗಳಿಂದ ಕ್ವಿಂಟಾಲ್‌ಗಟ್ಟಲೆ ಜೇನುತುಪ್ಪ ಸಂಗ್ರಹಿಸುತ್ತಿದ್ದಾರೆ. ಕೃಷಿಕರಿಗೆ ಆರ್ಥಿಕವಾಗಿ ಸಬಲರಾಗಲು ಜೇನು ಕೃಷಿ ನೆರವಾಗುತ್ತಿದೆ.



# ಮನುವಿಕಾಸದಿಂದ ರೈತ ಸಮುದಾಯಕ್ಕಾಗಿ "ನದಿ ಪಾತ್ರದ ಪ್ರದೇಶಗಳ ನಿರ್ವಹಣೆ" ಕಾರ್ಯಾಗಾರ

ಮನುವಿಕಾಸ ಸಂಸ್ಥೆಯು ಈಗಾಗಲೇ **ಜರ್ಮನಿ ಮೂಲದ ಹನ್ಸ್ ಸೀಡಲ್ ಫೌಂಡೇಶನ್ ಇಂಡಿಯಾದ** ಸಹಯೋಗದೊಂದಿಗೆ ರೈತಾಪಿ ಸಮುದಾಯಕ್ಕಾಗಿ ಹವಾಮಾನ ಬದಲಾವಣೆಯ ಗಂಭೀರ ಪರಿಣಾಮಗಳು, ಸಮಗ್ರ ಜಲಸಂಪನ್ಮೂಲ ನಿರ್ವಹಣೆ, ದಕ್ಷ ನೀರಿನ ಬಳಕೆಯ ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ಅವುಗಳಿಗೆ ಪೂರಕವಾಗಿ ಕ್ಷೇತ್ರ ಭೇಟಿ ಸೇರಿದಂತೆ ಕೃಷಿ ವಲಯದ ಹಲವು ಆಯಾಮಗಳ ಬಗೆಗಿನ ಚಟುವಟಿಕೆಗಳನ್ನು ರೂಪಿಸಿ ಸಕ್ರಿಯವಾಗಿ ಕಳೆದ ಮೂರು ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ.

ಸಂಸ್ಥೆಯು ಈಗಾಗಲೇ ಅಘನಾಶಿನಿ, ವರದಾ ಮತ್ತು ಬೇಡ್ತಿ ಪಾತ್ರಗಳ ಬದಲಾವಣೆಗಳ ಬಗೆಗೆ ಸಮಗ್ರ ಅಧ್ಯಯನವನ್ನು ಕೈಗೊಂಡಿದ್ದು ಈ ನದಿಗಳ ಪಾತ್ರಗಳ ಪ್ರದೇಶದ ನಿರ್ವಹಣೆ ಕುರಿತಾದ ಅಧ್ಯಯನ ವರದಿಯನ್ನು ಸಹ ಸರಕಾರಕ್ಕೆ ಸಲ್ಲಿಸಿದೆ. ಈ ವರದಿಯಲ್ಲಿ ಕಂಡು ಬಂದಂತಹ ಹಲವಾರು ಅನೂಹ್ಯ ಸಂಗತಿಗಳನ್ನು ರೈತರಿಗೆ ಮನವರಿಕೆ ಮಾಡಿಕೊಡಲು ಮತ್ತು ಅದಕ್ಕೆ ಸೂಕ್ತ ಕಾರ್ಯ ಯೋಜನೆಗಳನ್ನು ರೂಪಿಸಲು "**ನದಿ ಪಾತ್ರದ ಪ್ರದೇಶಗಳ ನಿರ್ವಹಣೆ**" ಕುರಿತಾದ ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ.

**ಪ್ರಸಕ್ತ ವರ್ಷ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ರೈತರಿಗಾಗಿ ಆಯೋಜಿಸಿದ ಕಾರ್ಯಾಗಾರಗಳ ಯಾದಿ ಇಲ್ಲಿದೆ.**

| ಕ್ರಮ ಸಂಖ್ಯೆ | ಜಿಲ್ಲೆ | ತಾಲೂಕು | ದಿನಾಂಕ | ಸ್ಥಳ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|---|
| 1 | ಉತ್ತರ ಕನ್ನಡ | ಶಿರಸಿ | 14/07/2023 | ಹೊಟೆಲ್ ಮಧುವನ, ಶಿರಸಿ | 59 |
| 2 | ಧಾರವಾಡ | ಕಲಘಟಗಿ | 23/07/2023 | ಹೊಟೆಲ್ ಐಶ್ವರ್ಯ ರೆಸಿಡೆನ್ಸಿ, ಕಲಘಟಗಿ | 85 |
| 3 | ಶಿವಮೊಗ್ಗ | ಸೊರಬ | 31/07/2023 | ಶ್ರೀ ಶಕ್ತಿ ಭವನ, ಸೊರಬ | 76 |
| 4 | ಹಾವೇರಿ | ಹಾನಗಲ್ | 14/08/2023 | ಗ್ರಾಮ ಪಂಚಾಯತ್ ಸಭಾಭವನ, ತಿಳವಳ್ಳಿ | 83 |













ಕಾರ್ಯಾಗಾರಕ್ಕೆ ವಿಷಯ ಪರಿಣಿತರಾದ ಡಾ. ಪ್ರಕಾಶ ಮೇಸ್ತ, ಡಾ. ಕೋಮಲಾ ಭಟ್ಟ, ಶ್ರೀ ಆರ್.ವಿ. ಭಾಗ್ವತ್, ಡಾ. ಪ್ರಜ್ವಲ್ ಕುಮಾರ ಡಿ.ಕೆ ಮತ್ತು ಹಲವು ವಲಯಗಳ ಪ್ರಗತಿಪರ ರೈತರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

## ಕಾರ್ಯಗಾರ ಆಯೋಜನೆಯ  ಮುಖ್ಯ ಉದ್ದೇಶಗಳೆಂದರೆ : -

* ನದಿ ಪಾತ್ರದ ಪ್ರದೇಶಗಳ ಪರಿಕಲ್ಪನೆ ಮತ್ತು ವ್ಯಾಖ್ಯಾನವನ್ನು ರೈತರಿಗೆ ತಿಳಿಹೇಳುವುದು.
* ಹವಾಮಾನ ಬದಲಾವಣೆ ಮತ್ತು ನದಿ ಪಾತ್ರದ ಪ್ರದೇಶಗಳ ನಡುವಣ ಸಂಬಂಧವನ್ನು ರೈತರಿಗೆ ವಿವರಿಸುವುದು
* ನದಿ ಪಾತ್ರದ ಪ್ರದೇಶಗಳ ಬದಲಾವಣೆಯಿಂದಾಗಿ ರೈತರ ಕೃಷಿ ವಲಯದಲ್ಲಾಗುವ ಬದಲಾವಣೆಗಳು, ಬೆಳೆನಾಶ ನೆರೆ ಹಾವಳಿ, ಬರ ಇತ್ಯಾದಿ ಮತ್ತು ಅದಕ್ಕೆ ಸೂಕ್ತ ಪರಿಹಾರಗಳ ಕುರಿತು ರೈತರೊಂದಿಗೆ ಚರ್ಚೆ ನಡೆಸುವುದು.
* ನದಿ ಪಾತ್ರದ ಪ್ರದೇಶಕ್ಕನುಗುಣವಾಗಿ ಬೆಳೆಗಳ ಆಯ್ಕೆ ಮತ್ತು ಬೆಳೆಗಳ ಮಾರ್ಪಾಡು ಮಾಡಿಕೊಳ್ಳುವ ಬಗೆ.
* ನದಿಪಾತ್ರದ ಪ್ರದೇಶಗಳ ಅಂಚಿನ ಮಣ್ಣಿನ ಫಲವತ್ತತೆ ಮತ್ತು ಗುಣಮಟ್ಟ ಪರೀಕ್ಷೆ ಹೇಗೆ ಮತ್ತು ಅದಕ್ಕೆ ಲಭ್ಯವಿರುವ ತಂತ್ರಜ್ಞಾನ.
* ನದಿ ಪಾತ್ರದ ಬದಲಾವಣೆಯಿಂದಾಗಿ ಜಲಚರಗಳು, ಪ್ರಾಣಿ– ಪಕ್ಷಿ ಸಂಕುಲದ ಮೇಲಾಗುವ ಪರಿಣಾಮಗಳು ಮತ್ತು ಪರೋಕ್ಷವಾಗಿ ಇದು ಕೃಷಿ ವಲಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗೆಗೆ ರೈತರಿಗೆ  ಮನವರಿಕೆ ಮಾಡಿಕೊಡುವುದು.
* ಜಲಾನಯನ ಪ್ರದೇಶಗಳ ಕೃಷಿ ಪದ್ಧತಿಯಲ್ಲಿನ ಬದಲಾವಣೆ, ಕಡಿಮೆ ಇಳುವರಿ ಮತ್ತು ಭೂ ಸವೆತದ ಕಾರಣಗಳನ್ನು ಅವಲೋಕಿಸುವುದು.
* ಪರಿಸರ ಪೂರಕ ಕೃಷಿ, ಸುಸ್ಥಿರ ಕೃಷಿ ಮತ್ತು ಪರಿಸರ ರಕ್ಷಣೆಗೆ ಮಹತ್ವವನ್ನು ತಿಳಿಸಿಕೊಡುವುದು.

ಕಾರ್ಯಾಗಾರದಲ್ಲಿ ವಿವಿಧ ತಾಲೂಕುಗಳ ಪ್ರಗತಿಪರ ರೈತರು ನದಿ ಪಾತ್ರದ ಬದಲಾವಣೆಯಿಂದಾಗಿ ಕೃಷಿ ವಲಯದಲ್ಲಿ ಉಂಟಾಗುತ್ತಿರುವ ಬದಲಾವಣೆಗಳು ಮತ್ತು ಅದಕ್ಕೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡರು. ಪರಸ್ಪರ ಚರ್ಚೆ ಮತ್ತು ವಿಷಯ ಪರಿಣಿತರ ಜೊತೆಗೆ ಸಂವಾದದ ಮೂಲಕ ತಮಗಿರುವ ಗೊಂದಲಗಳನ್ನು ಬಗೆಹರಿಸಿಕೊಂಡರು.

---

## ನರೇಗಾ ಯೋಜನೆಯಲ್ಲಿ ಕಾರ್ಯನಿರ್ವಹಿಸಿದ ಆಯ್ದ ಫಲಾನುಭವಿಗಳಿಗೆ ಮನುವಿಕಾಸ ಸಂಸ್ಥೆಯಿಂದ ಅಗತ್ಯ ಸಲಕರಣೆಗಳ  ವಿತರಣೆ

ಗ್ರಾಮೀಣ ಭಾಗದ ಅಭಿವೃದ್ಧಿ ಹಾಗೂ ಶ್ರಮಿಕರಿಗೆ ಉದ್ಯೋಗವನ್ನು ನೀಡುವ ಸಲುವಾಗಿ 2005ನೇ ಇಸವಿಯಲ್ಲಿ ದೇಶದ ಅಂದಿನ ಪ್ರಧಾನಿಯಾಗಿದ್ದ ಶ್ರೀ ಮನಮೋಹನ್ ಸಿಂಗ್ ಅವರ ಸರ್ಕಾರವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು(MGNREGA) ಜಾರಿಗೆ ತಂದಿತು. ಗ್ರಾಮೀಣ ಭಾಗದಲ್ಲಿ ವಾಸಿಸುವ ಜನರಿಗೆ ಅವರು ಹೊಂದಿರುವ ಉದ್ಯೋಗ ಚೀಟಿಯ ಆಧಾರದ ಮೇಲೆ ವರ್ಷಕ್ಕೆ 100 ದಿನಗಳ ಖಾಯಂ ಕೆಲಸವನ್ನು ಅಲ್ಲಿಯ ಸ್ಥಳೀಯ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿಯೇ ಒದಗಿಸಬೇಕು ಎಂಬುದು ಈ ಅಧಿನಿಯಮದ ಮುಖ್ಯ ಆಶಯವಾಗಿದೆ.



ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ ಜಿಲ್ಲೆಯಲ್ಲಿನ ಕೆಲ ಆಯ್ದ ತಾಲೂಕುಗಳಲ್ಲಿ ಜನರಿಗೆ MGNREGA ಯೋಜನೆಯ ಅರಿವು ಮೂಡಿಸಿ ಜನರನ್ನು ಸಂಘಟಿಸುವ  (ಕೆಲಸ ಕೊಡಿಸುವ) ಕಾರ್ಯವನ್ನು ಮಾಡುತ್ತಿದ್ದು ಅದರಲ್ಲಿ ಸಿದ್ದಾಪುರ ತಾಲೂಕು ಸಹ ಒಂದಾಗಿದೆ. ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯ ವತಿಯಿಂದ ನರೇಗಾ ಯೋಜನೆಯಲ್ಲಿ ಕೆಲಸ ನಿರ್ವಹಿಸಿದ ಆಯ್ದ ಫಲಾನುಭವಿಗಳಿಗೆ ಅಗತ್ಯ ಸಲಕರಣೆಗಳ ವಿತರಣಾ ಕಾರ್ಯಕ್ರಮವು ದಿನಾಂಕ 21/6/2023 ಬುಧವಾರದಂದು ಸಿದ್ದಾಪುರ ತಾಲೂಕಿನ ಬಾಲಭವನದಲ್ಲಿ ಜರುಗಿತು.







ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿ, ಮನುವಿಕಾಸವು ಕಳೆದ 20 ವರ್ಷಗಳಿಂದ ಬೇರೆ ಬೇರೆ ಬಗೆಯ ವಿನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ. 2000 ಕ್ಕೂ ಅಧಿಕ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದ್ದೇವೆ. ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆಯಿಂದಾಗಿ ಕಾಲಕ್ಕೆ ಸರಿಯಾಗಿ ಮಳೆಯಾಗುತ್ತಿಲ್ಲ. ಇದಕ್ಕೆ ಪರಿಹಾರದ ಮಾರ್ಗವಾಗಿ ಸಾವಿರಾರು ಕೃಷಿ ಹೊಂಡಗಳನ್ನು ಹಾಗೂ ರೈತರ ಸಹಭಾಗಿತ್ವದಲ್ಲಿ 225 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದ್ದೇವೆ. ಮಹಿಳೆಯರು ಉದ್ಯೋಗದಲ್ಲಿ ಸುಸ್ಥಿರತೆ ಕಾಣಲು ವಿವಿಧ ರೀತಿಯ ಕೌಶಲ್ಯ ತರಬೇತಿಗಳನ್ನು ನೀಡಿ, ಅವರ ಆರ್ಥಿಕ ಸುಧಾರಣೆಗೂ ಸಹ ಶ್ರಮಿಸುತ್ತಿದ್ದೇವೆ. ಉದ್ಯೋಗ ಖಾತರಿ ಯೋಜನೆಯು ನಿಮ್ಮ ಹಕ್ಕಾಗಿದೆ. ಈ ಯೋಜನೆಯ ಮೂಲಕ ನಿಮ್ಮ ಊರಿನ ಅಭಿವೃದ್ಧಿಯನ್ನು ನೀವೇ ಮಾಡಬಹುದಾಗಿದ್ದು, ಜೊತೆಯಲ್ಲಿ ನಿಮಗೆ ಆದಾಯವೂ ದೊರೆಯುತ್ತದೆ. ನಿಮ್ಮ ಊರಿನ ಅಭಿವೃದ್ಧಿ ನಿಮ್ಮ ಕೈಯಲ್ಲಿದೆ. ಜನರಿಗೆ ಅನುಕೂಲವಾಗಲು ಪ್ರಗತಿಮಿತ್ರ ಸೌಹಾರ್ದ ಬ್ಯಾಂಕನ್ನು ಸಿದ್ದಾಪುರ ತಾಲೂಕಿನಲ್ಲಿ ಆರಂಭಿಸಲಾಗಿದ್ದು ಜನ ಸಮುದಾಯವು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ತಾಲೂಕಿನ ಕಾರ್ಯ ನಿರ್ವಹಣಾ ಅಧಿಕಾರಿಗಳಾದ ಶ್ರೀ ಪ್ರಶಾಂತ್ ರಾವ್ ಮಾತನಾಡಿ, ನರೇಗಾ ಯೋಜನೆಯನ್ನು ಉತ್ತಮವಾಗಿ ಕೊಂಡೊಯ್ಯುವಲ್ಲಿ ಮನುವಿಕಾಸ ಸಂಸ್ಥೆಯ ಪಾತ್ರ ಬಹಳ ಮಹತ್ವದ್ದಾಗಿದೆ. ನರೇಗಾ ಯೋಜನೆಯಲ್ಲಿ ಕೆಲಸದ ವೇತನ ವಿಳಂಬವಾಗುತ್ತದೆ ಎಂಬುದು ಕೇವಲ ಗಾಳಿಸುದ್ದಿ ಆಗಿದ್ದು ಯಾರೂ ಸಹ ಗಾಳಿಸುದ್ದಿಗೆ ಕಿವಿಗೊಡಬೇಡಿ. ನೀರಿನ ಸಂರಕ್ಷಣೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದ್ದು, ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಜನರು ನಮ್ಮೊಂದಿಗೆ ಕೈಜೋಡಿಸಬೇಕು ಎಂದು ಜನರಿಗೆ ಕರೆ ನೀಡಿದರು.

ಅತಿಥಿಗಳಾಗಿ ಆಗಮಿಸಿದ್ದ ಶಿಕ್ಷಣ ಪ್ರಸಾರಕ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ್ ಹೆಗಡೆಯವರು ಮಾತನಾಡಿ, ನರೇಗಾ ಎಂಬುದು ಐತಿಹಾಸಿಕ ಹೆಜ್ಜೆ ಆಗಿದ್ದು, ಯೋಜನೆ ರೂಪಿತಗೊಂಡಿದ್ದು 1991ರಲ್ಲಿ ಆಗಿದ್ದರೂ ಸಹ ಅನುಷ್ಠಾನಕ್ಕೆ ಬಂದಿದ್ದು 2005ರಲ್ಲಿ. ಉದ್ಯೋಗ ಪ್ರತಿಯೊಬ್ಬನ ಹಕ್ಕು. ನರೇಗಾ ಯೋಜನೆಯು ಉದ್ಯೋಗವನ್ನು ನೀಡುವುದರ ಜೊತೆಯಲ್ಲಿ ಸಾಮಾಜಿಕ ಭದ್ರತೆಯನ್ನೂ ಸಹ ಒದಗಿಸಿದೆ. ಈ ಯೋಜನೆಯ ಅನುಷ್ಠಾನದಲ್ಲಿ ಸಿದ್ದಾಪುರ ತಾಲೂಕು ರಾಜ್ಯಕ್ಕೆ ಮಾದರಿ ಆಗುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸಿದ 100 ಕ್ಕೂ ಅಧಿಕ ದಿನಗೂಲಿ ಕಾರ್ಮಿಕರಿಗೆ ಸಂಸ್ಥೆಯ ವತಿಯಿಂದ ಉಚಿತವಾಗಿ ಗುದ್ದಲಿ, ಪಿಕಾಸಿ ಮತ್ತು ಬುಟ್ಟಿಗಳನ್ನು ವಿತರಿಸಲಾಯಿತು, ಕಾರ್ಯಕ್ರಮದಲ್ಲಿ ಕೃಷಿ ಮಾರುಕಟ್ಟೆಯ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಜಿ.ನಾಗರಾಜ್, ಪಟ್ಟಣ ಪಂಚಾಯತ ಅಧಿಕಾರಿಗಳಾದ ಶ್ರೀ ಐ.ಜಿ.ಕುನ್ನೂರು ಸಮಾಜ ಸೇವಕರಾದ ಶ್ರೀ ಪ್ರಶಾಂತ್ ನಾಯ್ಕ್, ಶ್ರೀ ವಿ.ಎನ್.ನಾಯ್ಕ್, ಶ್ರೀ ಉಮೇಶ ನಾಯ್ಕ್, ಶ್ರೀ ಸುರೇಂದ್ರ ಗೌಡ ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



ದಿನಾಂಕ 27/09/2023ರಂದು ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕ ಸಂಘದ ವಾರ್ಷಿಕ ಸರ್ವ ಸಾಧಾರಣ ಸಭೆಯು ಗಂಗೆಕೊಳ್ಳ ಸಭಾಭವನದಲ್ಲಿ ಜರುಗಿತು.






ದಿನಾಂಕ 30/09/2023ರಂದು ಮೀನುಗಾರಿಕಾ ಪೆಡರೇಶನ್ ಹಾಲ್‌ನಲ್ಲಿ ಉತ್ತರ ಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಮತ್ತು ಉತ್ಪಾದಕರ ಸಂಘ ವಾರ್ಷಿಕ ಸರ್ವಸಾಧಾರಣ ಸಭೆಯು ಜರುಗಿತು.







ದಿನಾಂಕ 29/09/2023ರಂದು ಕಾಸರಕೋಡು ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘದ ವಾರ್ಷಿಕ ಸರ್ವ ಸಾಧಾರಣ ಸಭೆಯು ಸ್ನೇಹ ಕುಂಜದಲ್ಲಿನ ಡಾ. ಕುಸುಮ ಸಭಾಭವನದಲ್ಲಿ ಜರುಗಿತು.








**ದಿನಾಂಕ 27/09/2023 ರಂದು**
**ಪ್ರಗತಿಮಿತ್ರ ನಾರ್ಥ ಕೆನರಾ ಫಾರ್ಮರ್ಸ್ ಪ್ರೊಡ್ಯುಸರ್ ಕಂಪನಿಯ ವಾರ್ಷಿಕ ಸರ್ವ ಸಾಧಾರಣ ಸಭೆಯು ಶಿರಸಿಯ ಸಾಮ್ರಾಟ್ ಹೋಟೆಲ್‌ನ ವಿನಾಯಕ ಹಾಲ್‌ನಲ್ಲಿ ಜರುಗಿತು.**





**ದಿನಾಂಕ 25/09/2023 ರಂದು**
**ಸಿದ್ದಾಪುರದ ಲಯನ್ಸ್ ಬಾಲಭವನದಲ್ಲಿ ಪ್ರಗತಿ ಮಿತ್ರ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆಯು ಜರುಗಿತು.**







**ಮನುವಿಕಾಸ ಸಂಸ್ಥೆ ಉತ್ತರಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಬಂಧಿತ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ<br>(ಕೆರೆ ಅಭಿವೃದ್ಧಿಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9449453774 |
| | ಅಶ್ವತ್ಥ ನಾಯ್ಕ್<br>(ಕೆರೆ ಅಭಿವೃದ್ಧಿಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9901182957 |
| | ಗಣಪತಿ ಗಾಮದ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 9113259935 |
| | ಭವಾನಿ ನಾಯ್ಕ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 8296053961 |
| | ಬಾಲಚಂದ್ರ ಗೌಡ<br>(ಕೆರೆ ಅಭಿವೃದ್ಧಿಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9480416732 |
| ಹಿರೇಕೆರೂರು | ಶೇಖರ್ ನಾಯ್ಕ್<br>(ಕೆರೆ ಅಭಿವೃದ್ಧಿ ಹಾಗೂ ಸ್ವ ಸಹಾಯ ಸಂಘಗಳ ನಿರ್ವಹಣೆ) | 7795228417 |
| ಸಿದ್ದಾಪುರ | ಪುನೀತ್ ನಾಯ್ಕ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 9686224908 |
| | ನಾಗರಾಜ್ ಹಸ್ಲರ್<br>(ಕೆರೆ ಅಭಿವೃದ್ಧಿ ಹಾಗೂ ಸ್ವ ಸಹಾಯ ಸಂಘಗಳ ನಿರ್ವಹಣೆ) | 7022763799 |
| ಬ್ಯಾಡಗಿ | ರವಿ ಗೌಡ<br>(ಕೆರೆ ಅಭಿವೃದ್ಧಿ ಹಾಗೂ ಸ್ವ ಸಹಾಯ ಸಂಘಗಳ ನಿರ್ವಹಣೆ) | 9740748932 |
| ಹಳಿಯಾಳ<br>ದಾಂಡೇಲಿ | ನಿರಂಜನ್ ಕದಂ<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 7259689630 |
| ಮುಂಡಗೋಡ | ಬಸವರಾಜ ರಡ್ಡೇರ<br>(ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 8095311643 |
| ಹಾನಗಲ್ | ಜಗದೀಶ ಈರಣ್ಣನವರ್<br>(ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 7338006242 |
| ಕಲಘಟಗಿ | ಗಣಪತಿ ಯಲಿವಾಳ<br>(ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9980205013 |
| ಕಾರವಾರ | ಸುಜಾತಾ ದುರ್ಗೆಕರ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 7204577307 |
| ಅಂಕೋಲಾ | ಮಹೇಶ್ ನಾಯ್ಕ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 8277002750 |
| ಕುಮಟಾ | ರಮೇಶ್ ನಾಯ್ಕ್<br>(ಸ್ವ ಸಹಾಯ ಸಂಘಗಳ ನಿರ್ವಹಣೆ) | 9902624877 |
| ಸೊರಬ | ಅಶ್ವತ್ಥ್ ನಾಯ್ಕ<br>(ಕೆರೆ ಅಭಿವೃದ್ಧಿ ನಿರ್ವಹಣೆ) | 9901182957 |



ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಕ್ಯೂ.ಆರ್‌ಕೋಡ್‌ಅನ್ನು ಸ್ಕ್ಯಾನ್ ಮಾಡಿ

# ಮನುವಿಕಾಸ


**ನೋಂದಾಯಿತ ಕಛೇರಿ**

ಸಾ: ಕರ್ಜಗಿ, ಪೋ: ಬಾಳೂರು ತಾ: ಸಿದ್ದಾಪುರ
ಉತ್ತರಕನ್ನಡ-581340, ಕರ್ನಾಟಕ, ಭಾರತ
ದೂ: 9845982552

**ಆಡಳಿತ ಕಛೇರಿ :**

"ಶ್ರೀ ಮಾತಾ"ಬಿಲ್ಡಿಂಗ್, ವಿಜಯನಗರ, ತಾ: ಶಿರಸಿ
ಉತ್ತರಕನ್ನಡ-581401, ಕರ್ನಾಟಕ, ಭಾರತ
ದೂ: 9845982552

email : manuvikasa@gmail.com web : www.manuvikasa.org